**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು**

**S.C. No. 231/2022**

**ಸಾಕ್ಷಿಯನ್ನು ದಿನಾಂಕ 26.11.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಕೇಶವಮೂರ್ತಿ ಸಿ ಎಂ | ಪಿ.ಡಬ್ಲ್ಯೂ-20 |
| ತಂದೆಯ/ಗಂಡನ ಹೆಸರು | : | ಮಂಚಯ್ಯ | ಸಿ.ಡಬ್ಲ್ಯೂ-33 |
| ವಯಸ್ಸು | : | 45 | |
| ಉದ್ಯೋಗ | : | ಸಹಾಯಕ ಕಾರ್ಯ ನಿರ್ವಾಹಕ ಇಂಜನಿಯರ್ ಚೆಸ್ಕಾಂ, ವಿ.ವಿ.ಮೊಹಲ್ಲ | |
| ವಾಸ ಸ್ಥಳ | : | ಮೈಸೂರು | |

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ</u>**

ನಾನು 2018 ರಿಂದ ಸಹಾಯಕ ಕಾರ್ಯ ನಿರ್ವಾಹಕ ಇಂಜನಿಯರ್ ಆಗಿ ಚೆಸ್ಕಾಂ, ವಿ.ವಿ.ಮೊಹಲ್ಲ, ಮೈಸೂರು ಇಲ್ಲಿ ಕಾರ್ಯ ನಿರ್ವಹಿಸುತ್ತಿದ್ದೇನೆ. ಹೆಬ್ಬಾಳ ಪೊಲೀಸ್ ಠಾಣೆಯಿಂದ ಕ್ರೈಂ ನಂ.59/2021 ಪ್ರಕರಣದಲ್ಲಿ ಮೈಸೂರು ನಗರದ ಹೆಬ್ಬಾಳ 1 ನೇ ಹಂತದ 2 ನೇ ಕ್ರಾಸ್ ನಲ್ಲಿರುವ ಮನೆ ನಂ.887 ಈ ಮನೆಗೆ ವಿದ್ಯುತ್ ಸಂಪರ್ಕ ಪಡೆದಿರುವವರ ವಿಳಾಸ ಹಾಗೂ ಹೆಸರು ನೀಡುವಂತೆ ಹಾಗೂ ಮನೆಯ ಮಾಲೀಕತ್ವದ ಕುರಿತು ನೀಡಿರುವ ದಾಖಲೆಗಳು ಹಾಗೂ ಇತ್ತೀಚಿನ ಬಿಲ್‌ಗಳನ್ನು

ನೀಡುವಂತೆ ದಿನಾಂಕ 21.12.2021ರಂದು ಮಾಹಿತಿಯನ್ನು ಹೆಬ್ಬಾಳ ಪೊಲೀಸ್ ಠಾಣೆಯವರು ಕೇಳಿದ್ದರು. ಕಡತವನ್ನು ಪರಿಶೀಲಿಸಿದಾಗ ಸದರಿ ವಿದ್ಯುತ್ ಸಂಪರ್ಕವು ಎನ್.ಸಿದ್ದಚಾರಿ ಇವರ ಹೆಸರಿನಲ್ಲಿರುವುದು ಕಂಡು ಬಂದಿರುತ್ತದೆ. ಆ ವಿದ್ಯುತ್ ಸಂಪರ್ಕ ಪಡೆಯಲು ನೀಡಿದ್ದ ನೋಂದಾಯಿತವಲ್ಲದ ಕ್ರಯಪತ್ರದ ಪ್ರತಿ ಮತ್ತು ಇತ್ತೀಚಿನ ವಿದ್ಯುತ್ ಬಿಲ್ ಪ್ರತಿಗಳನ್ನು ತನಿಖಾಧಿಕಾರಿಗೆ ನೀಡಿದ್ದೇನೆ. ಈಗ ನಾನು ನೋಡುತ್ತಿರುವ ದಾಖಲೆಗಳು ಅವೇ ಇರುತ್ತವೆ. ಸದರಿ ದಾಖಲೆಗಳನ್ನು ತನಿಖಾಧಿಕಾರಿಯ ಪತ್ರ ಮತ್ತು ಕವರಿಂಗ್ ಲೆಟರಿನೊಂದಿಗೆ ಒಟ್ಟಾಗಿ ನಿಪಿ29 ಎಂದು, ಸಹಿಯನ್ನು ನಿಪಿ29 ಎ ಎಂದು ಗುರುತಿಸಿದೆ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎನ್.ಎನ್.ಆರ್ ವಕೀಲರಿಂದಃ</u>**

ನಾನು ಪೋಲಸರೊಂದಿಗೆ ಶಾಮೀಲಾಗಿ ದಾಖಲೆಗಳನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ತ ನ್ಯಾಯಾಧೀಶರು
ಮೈಸೂರು